**23/04/22** ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ - ತಂದೆಯನ್ನು ನೆನಪು ಮಾಡುವಂತಹ ಹವ್ಯಾಸ ಮಾಡಿಕೊಂಡಾಗ ದೇಹೀ-ಅಭಿಮಾನಿಯಾಗುತ್ತೀರಿ, ನಶೆ ಹಾಗೂ ಖುಷಿಯು ಸ್ಥಿರವಾಗಿರುತ್ತದೆ, ಚಲನೆಯು ಸುಧಾರಣೆಯಾಗುತ್ತದೆ"

ಪ್ರಶ್ನೆ: ಜ್ಞಾನಾಮೃತವನ್ನು ಕುಡಿಯುತ್ತಿದ್ದರೂ ಕೆಲವು ಮಕ್ಕಳು ಪದವಿ ಭ್ರಷ್ಟರಾಗುತ್ತಾರೆ - ಏಕೆ?

ಉತ್ತರ: ಒಂದು ಕಡೆ ಜ್ಞಾನಾಮೃತವನ್ನು ಕುಡಿಯುತ್ತಾ, ಮತ್ತೊಂದು ಕಡೆ ಕೆಟ್ಟ ಕರ್ಮವನ್ನು ಮಾಡುತ್ತಾ ಅರ್ಥಾತ್ ಆಸುರೀ ಚಲನೆಯಂತೆ ನಡೆದು ಡಿಸ್-ಸರ್ವೀಸ್ ಮಾಡುತ್ತಾ, ಈಶ್ವರನ ಮಕ್ಕಳಾಗಿ ತಮ್ಮ ಚಲನೆಯನ್ನು ಸುಧಾರಣೆ ಮಾಡಿಕೊಳ್ಳದೆ, ಪರಸ್ಪರ ಮಾಯಾವೀ ಮಾತುಗಳನ್ನು ಮಾತನಾಡುತ್ತಾ, ಪರಸ್ಪರ ದುಃಖಿಗಳನ್ನಾಗಿ ಮಾಡುತ್ತಿರುತ್ತಾರೆ. ಅಂತಹವರು ಪದವಿ ಭ್ರಷ್ಟರಾಗಿದ್ದಾರೆ. ತಂದೆ ತಿಳಿಸುತ್ತಾರೆ - ಮಕ್ಕಳೇ, ನೀವಿಲ್ಲಿ ಆಸುರರಿಂದ ದೇವತೆಯಾಗಲು ಬಂದಿದ್ದೀರಿ ಅಂದಮೇಲೆ ಪರಸ್ಪರದಲ್ಲಿ ಸದಾ ಜ್ಞಾನದ ಚರ್ಚೆಯನ್ನು ಮಾಡಿ, ದೈವೀ ಗುಣಗಳನ್ನು ಧಾರಣೆ ಮಾಡಿ, ಆಂತರ್ಯದಲ್ಲಿ ಯಾವ ಅವಗುಣಗಳಿವೆ ಅದನ್ನು ತೆಗೆಯಿರಿ. ಬುದ್ಧಿಯನ್ನು ಸ್ವಚ್ಛ, ಶುದ್ಧ ಮಾಡಿಕೊಳ್ಳಬೇಕಾಗಿದೆ.

ಗೀತೆ: ಅದೃಷ್ಟವನ್ನು ಬೆಳಗಿಸಿಕೊಂಡು ಬಂದಿದ್ದೇನೆ........

ಓಂ ಶಾಂತಿ. ಮಕ್ಕಳು ಹಾಡನ್ನು ಕೇಳಿದಿರಿ ಹಾಗೂ ಈ ಹಾಡನ್ನು ಮಕ್ಕಳೇ ಹಾಡಿದ್ದಾರೆ. ಯಾವುದೇ ಶಾಲೆಯಲ್ಲಿ ಹೋದಾಗ ಈ ಪರೀಕ್ಷೆಯಲ್ಲಿ ತೇರ್ಗಡೆಯಾಗುತ್ತೇನೆಂದು ಅದೃಷ್ಟವು (ಲಕ್ಷ್ಯ) ಬುದ್ಧಿಯಲ್ಲಿರುತ್ತದೆ. ಬುದ್ಧಿಯಲ್ಲಿ ಭವಿಷ್ಯದ ಗುರಿ-ಉದ್ದೇಶವಿರುತ್ತದೆ. ನಾವು ನಮ್ಮ ಬುದ್ಧಿಯಲ್ಲಿ ಹೊಸ ಪ್ರಪಂಚವನ್ನು ಧಾರಣೆ ಮಾಡಿದ್ದೇವೆಂದು ಈಗ ನೀವು ಮಕ್ಕಳು ತಿಳಿದುಕೊಂಡಿದ್ದೀರಿ. ಹೊಸ ಪ್ರಪಂಚವನ್ನು ರಚಿಸುವಂತಹ ಪರಮಪಿತ ಪರಮಾತ್ಮನಿಂದ ನಾವು ಆಸ್ತಿಯನ್ನು ತೆಗೆದುಕೊಳ್ಳುವಂತಹ ಅದೃಷ್ಟವನ್ನು ತೆಗೆದುಕೊಂಡು ಬಂದಿದ್ದೇವೆ. ಯಾವ ಆಸ್ತಿ? ಮನುಷ್ಯರಿಂದ ದೇವತೆಯಾಗುವ ಅಥವಾ ನರನಿಂದ ನಾರಾಯಣನಾಗುವ ಆಸ್ತಿ ಅಥವಾ ರಾವಣನ ಭ್ರಷ್ಟಾಚಾರಿ ರಾಜ್ಯದಿಂದ ನಮ್ಮನ್ನು ಕರೆದೊಯ್ಯುತ್ತಾರೆಂದು ಹೇಳಬಹುದು. ಇದು ರಾವಣನ ಭ್ರಷ್ಟಾಚಾರಿ ರಾಜ್ಯವಾಗಿದೆ. ಭ್ರಷ್ಟಾಚಾರಿಯ ಜನ್ಮ ವಿಕಾರದಿಂದ ಆಗುತ್ತದೆ ಹಾಗೂ ವಿಕಾರಿಗೆ ಭ್ರಷ್ಟಾಚಾರಿ ಎಂದು ಹೇಳಲಾಗುವುದು. ಭಗವಾನುವಾಚ – ಕಾಮ ಮಹಾಶತ್ರುವಾಗಿದೆ. ನೀವು ಇದರ ಮೇಲೆ ವಿಜಯಿಗಳಾಗಬೇಕು, ಆಗ ಶ್ರೇಷ್ಠಾಚಾರಿಗಳಾಗುತ್ತೀರಿ. ಭಾರತವೇ ಭ್ರಷ್ಟಾಚಾರಿ, ಭಾರತವೇ ಶ್ರೇಷ್ಠಾಚಾರಿಯಾಗುತ್ತದೆ. ಪತಿತರಿಗೆ ಭ್ರಷ್ಟಾಚಾರಿ ಎಂದು ಹೇಳಲಾಗುತ್ತದೆ. ಸತ್ಯಯುಗದಲ್ಲಿ ಭ್ರಷ್ಟಾಚಾರಿಗಳೇ ಇರುವುದಿಲ್ಲ ಏಕೆಂದರೆ ಅಲ್ಲಿ ಮಾಯೆಯ ರಾಜ್ಯವಿರುವುದಿಲ್ಲ. ಈ ಸಮಯದಲ್ಲಿ ಇರುವುದೇ ರಾವಣ ರಾಜ್ಯ. ಎಲ್ಲರಲ್ಲಿ ಪಂಚ ವಿಕಾರಗಳಿವೆ. ಒಂದುವೇಳೆ ಸತ್ಯಯುಗದಲ್ಲಿ ರಾವಣ ರಾಜ್ಯ ಇರುವುದಾದರೆ ಅಲ್ಲಿಯೂ ಸಹ ರಾವಣನನ್ನು ಸುಡುತ್ತಿದ್ದರು ಆದರೆ ಅಲ್ಲಿ ಈ ಮಾತುಗಳಿರುವುದಿಲ್ಲ. ಅಲ್ಲಿ ಎಲ್ಲರೂ ಶ್ರೇಷ್ಠಾಚಾರಿಗಳಿರುತ್ತಾರೆ. ಭ್ರಷ್ಟಾಚಾರಿ ಪ್ರಪಂಚದಲ್ಲಿ ಯಾರಾದರೂ ಉನ್ನತ ಸ್ಥಾನದಲ್ಲಿದ್ದರೆ, ಎಲ್ಲರೂ ಅವರಿಗೆ ಗೌರವ ಕೊಡುತ್ತಾರೆ. ಹೇಗೆ ಸನ್ಯಾಸಿಗಳು ಬಹಳ ಉನ್ನತ ಸ್ಥಾನದಲ್ಲಿದ್ದರೆ ಎಲ್ಲರೂ ಅವರಿಗೆ ಗೌರವ ಕೊಡುತ್ತಾರೆ ಏಕೆಂದರೆ ಅವರು ಪವಿತ್ರವಾಗಿರುವ ಕಾರಣ ಎಲ್ಲಾ ಮನುಷ್ಯರು ಅವರನ್ನು ಉತ್ತಮರೆಂದು ತಿಳಿದುಕೊಳ್ಳುತ್ತಾರೆ. ಸರ್ಕಾರವೂ ಸಹ ಅವರನ್ನು ತಮಗಿಂತ ಉತ್ತಮರೆಂದು ತಿಳಿದುಕೊಳ್ಳುತ್ತದೆ. ಅವರನ್ನು ರಹಸ್ಯವಾಗಿ ತಮ್ಮ ಗುರುಗಳನ್ನಾಗಿಯೂ ಮಾಡಿಕೊಳ್ಳುತ್ತಾರೆ. ಸತ್ಯಯುಗದಲ್ಲಂತೂ ಗುರುವಿನ ಹೆಸರು ಇರುವುದೇ ಇಲ್ಲ. ಗುರು ಅರ್ಥಾತ್ ಸದ್ಗತಿ ಕೊಡುವವರು ಆದರೆ ಶಾಸ್ತ್ರಗಳಲ್ಲಿ ಇಂತಹ ಕಟ್ಟು ಕಥೆಗಳನ್ನು ಬರೆದಿದ್ದಾರೆ - ರಾಜಾ ಜನಕನು ಯಾರಲ್ಲಿ ಬ್ರಹ್ಮ ಜ್ಞಾನ, ರಾಜಯೋಗದ ಜ್ಞಾನವಿರಲಿಲ್ಲ ಅವರನ್ನು (ಗುರುಗಳನ್ನು) ಜೈಲಿನಲ್ಲಿ ಹಾಕಿದರು. ಯಾವಾಗ ಅವರಿಗೆ ರಾಜಯೋಗದ ಜ್ಞಾನ ಪ್ರಾಪ್ತಿಯಾಯಿತು ಆಗ ಅವರು ಒಂದು ಸೆಕೆಂಡಿನಲ್ಲಿ ಜೀವನ್ಮುಕ್ತಿಯನ್ನು ಪ್ರಾಪ್ತಿ ಮಾಡಿಕೊಂಡರು. ಭ್ರಷ್ಟಾಚಾರಿ ಎಂದರೆ ಕೇವಲ ಲಂಚ ಮೊದಲಾದವುಗಳನ್ನು ತೆಗೆದುಕೊಳ್ಳುವವರು ಎಂದಲ್ಲ. ಎಲ್ಲಾ ಮನುಷ್ಯ ಮಾತ್ರರು ಭ್ರಷ್ಟಾಚಾರಿಗಳಾಗಿದ್ದಾರೆ ಏಕೆಂದರೆ ಎಲ್ಲರ ಶರೀರವು ವಿಕಾರದಿಂದ ಜನ್ಮವಾಗುತ್ತದೆಯೆಂದು ತಂದೆಯು ಹೇಳುತ್ತಾರೆ. ನಿಮ್ಮ ಶರೀರವೂ ಸಹ ವಿಕಾರದಿಂದ ಜನ್ಮವಾಗಿದೆ ಆದರೆ ಈಗ ನೀವು ತಮ್ಮನ್ನು ಆತ್ಮನೆಂದು ತಿಳಿದು ತಂದೆಗೆ ಮಕ್ಕಳಾಗಿದ್ದೀರಿ, ದೇಹಾಭಿಮಾನವನ್ನು ಬಿಟ್ಟಿದ್ದೀರಿ ಆದುದರಿಂದ ನೀವು ಪರಮಪಿತ ಪರಮಾತ್ಮನ ಮುಖ ವಂಶಾವಳಿ ಈಶ್ವರೀಯ ಸಂತಾನರಾಗಿದ್ದೀರಿ. ಪರಮಪಿತ ಪರಮಾತ್ಮನೇ ಬಂದು ನೀವು ಆತ್ಮಗಳನ್ನು ತನ್ನ ಮಕ್ಕಳನ್ನಾಗಿ ಮಾಡಿಕೊಂಡಿದ್ದಾರೆ. ಇವೆಲ್ಲಾ ಬಹಳ ರಹಸ್ಯಯುಕ್ತ ಮಾತುಗಳಾಗಿವೆ. ನಾವು ಆತ್ಮರು ಪರಮಪಿತ ಪರಮಾತ್ಮನ ವಂಶಾವಳಿಯಾಗಿದ್ದೇವೆ. "ಬಾಬಾ" ಎಂದು ಆತ್ಮವೇ ಹೇಳುತ್ತದೆ. ಸತ್ಯಯುಗದಲ್ಲಿ ಯಾವ ಆತ್ಮವೂ ಸಹ ಪರಮಾತ್ಮನನ್ನು ಬಾಬಾ ಎಂದು ಹೇಳುವುದಿಲ್ಲ. ಅಲ್ಲಿ ಜೀವಾತ್ಮರು, ಜೀವಾತ್ಮನಿಗೆ ತಂದೆಯೆಂದು ಹೇಳುತ್ತಾರೆ. ನೀವು ಜೀವಾತ್ಮರಾಗಿದ್ದೀರಿ. ಈಗ ತಮ್ಮನ್ನು ಆತ್ಮನೆಂದು ನಿಶ್ಚಯ ಮಾಡಿಕೊಂಡು ಪರಮಾತ್ಮನನ್ನು ನೆನಪು ಮಾಡಿ ಎಂದು ತಂದೆಯು ಹೇಳಿದ್ದಾರೆ. ಎಲ್ಲರಿಗಿಂತ ಉತ್ತಮ ಜನ್ಮ ನೀವು ಬ್ರಾಹ್ಮಣರದಾಗಿದೆ. ನಾವು ನಿಮ್ಮ ಮಕ್ಕಳಾಗಿದ್ದೇವೆಂದು ಆತ್ಮವೇ ಹೇಳುತ್ತದೆ. ಆತ್ಮವು ಗರ್ಭದಿಂದ ಜನ್ಮ ಪಡೆಯುದಿಲ್ಲ ಆದರೆ

ತಂದೆಯನ್ನು ತಿಳಿದು ಅವರ ಮಕ್ಕಳಾಗಿದ್ದೇವೆ. ಶಿವ ಬಾಬಾ ನಾವು ತಮ್ಮ ಮಕ್ಕಳೇ ಆಗಿದ್ದೇವೆ ಮತ್ತು ತಮ್ಮ ಮತದಂತೆಯೇ ನಡೆಯುತ್ತೇವೆ. ಎಷ್ಟೊಂದು ಸೂಕ್ಷ್ಮ ಮಾತುಗಳಾಗಿವೆ. ಯಾವಾಗ ನೀವು ತಂದೆಯ ಸಮ್ಮುಖದಲ್ಲಿ ಹೋಗುತ್ತೀರಿ, ಆಗ ನಾವು ಶಿವ ತಂದೆಯ ಮುಂದೆ ಕುಳಿತಿದ್ದೇವೆಂದು ನಿಶ್ಚಯ ಮಾಡಿಕೊಳ್ಳಿ ಎಂದು ತಂದೆತು ತಿಳಿಸಿದ್ದಾರೆ. ಆತ್ಮವೂ ನಿರಾಕಾರನಾಗಿದೆ ಅಂದಮೇಲೆ ಶಿವ ತಂದೆಯೂ ನಿರಾಕಾರನಾಗಿದ್ದಾರೆ. ಶಿವ ತಂದೆಯ ನೆನಪಿನಿಂದಲೇ ವಿಕರ್ಮ ವಿನಾಶವಾಗುತ್ತದೆ. ನೆನಪು ಮಾಡುವುದಿಲ್ಲವೆಂದರೆ ಭ್ರಷ್ಟಾಚಾರಿಯಾಗಿತ್ತೀರಿ. ಎಷ್ಟೊಂದು ಕಠಿಣ ಮಾತುಗಳಾಗಿವೆ ಆದರೆ ಬಹಳಷ್ಟು ಮಕ್ಕಳು ನಾನು ಆತ್ಮ ಪರಮಪಿತ ಪರಮಾತ್ಮನ ಮಡಿಲಲ್ಲಿ ಕುಳಿತಿದ್ದೇನೆ ಎಂಬುದನ್ನು ಮರೆತು ಬಿಡುತ್ತಾರೆ. ಮರೆಯುವ ಕಾರಣ ಆ ನಶೆ-ಖುಷಿಯಿರುವುದಿಲ್ಲ. ತಂದೆಯನ್ನು ನೆನಪು ಮಾಡುವ ಹವ್ಯಾಸವಾಯಿತೆಂದರೆ ದೇಹೀ-ಅಭಿಮಾನಿಯಾಗಿ ಬಿಡುವಿರಿ. ವಿದೇಶದಲ್ಲಿ ಅನೇಕ ಮಕ್ಕಳಿದ್ದಾರೆ, ಕೇವಲ ಸಮ್ಮುಖದಲ್ಲಿಲ್ಲ. ಆದರೆ ಅವರು ತಂದೆಯನ್ನು ನೆನಪು ಮಾಡುತ್ತಾರೆ. ಹೇಗೆ ಪ್ರಿಯತಮ-ಪ್ರಿಯತಮೆಯರು ಪ್ರೀತಿಯಿಂದ ನೆನಪು ಮಾಡುವಂತೆ ನಾವು ತಂದೆಯನ್ನು ಬಹಳ ಪ್ರೀತಿಯಿಂದ ನೆನಪು ಮಾಡಬೇಕು. ಪತ್ರ ಬರದಿದ್ದರೆ ಪ್ರಿಯತಮೆಯು ಬಹಳ ದುಃಖಿಯಾಗುತ್ತಾಳೆ ಆದರೆ ನೀವು ಪ್ರಿಯತಮೆಯರಿಗಂತು ಬಹಳ ದುಃಖವನ್ನು ಅನುಭವ ಮಾಡಿದ ನಂತರ ಪ್ರಿಯತಮ ಸಿಕ್ಕಿರುವ ಕಾರಣ ಬಹಳ ಚೆನ್ನಾಗಿ ನೆನಪು ಮಾಡಬೇಕು. ಚಲನೆಯೂ ಸಹ ಬಹಳ ಶ್ರೇಷ್ಠವಾಗಿರಬೇಕು ಏಕೆಂದರೆ ಆಸುರಿ ಚಲನೆಯಿರುವವರ ಗಂಟಲು ಒಣಗಿ ಬಿಡುತ್ತದೆ. ತಂದೆಯು ಚಲನೆಯಿಂದಲೇ ಇವರು ನೆನಪು ಮಾಡುವುದಿಲ್ಲ, ಆದ್ದರಿಂದ ಧಾರಣೆ ಆಗುವುದಿಲ್ಲವೆಂದು ತಿಳಿದುಕೊಳ್ಳುತ್ತಾರೆ. ಸೇವೆ ಮಾಡುವುದಿಲ್ಲವೆಂದರೆ ಪದವಿಯೂ ಸಹ ಸಿಗುವುದಿಲ್ಲ. ಮೊಟ್ಟ ಮೊದಲು ತಂದೆಯ ಮಕ್ಕಳಾಗಬೇಕು. ಬ್ರಹ್ಮಾಕುಮಾರ-ಕುಮಾರಿಯರಾಗಬೇಕಾಗುತ್ತದೆ. ಬಿ.ಕೆ.,ಗಳಿಗೆ ಅವಶ್ಯವಾಗಿ ಶಿವ ತಂದೆಯೇ ನೆನಪಿರುತ್ತದೆ ಏಕೆಂದರೆ ತಾತನಿಂದ ಆಸ್ತಿ ತೆಗೆದುಕೊಳ್ಳಬೇಕಾಗಿದೆ. ನೆನಪಿನಲ್ಲಿರುವುದು ಬಹಳ ಶ್ರಮದ ಮಾತಾಗಿದೆ. ಭೋಗ ಸ್ವೀಕಾರ ಮಾಡಿ ನಾವು ಊಟ ಮಾಡಿದರೆ ಬುದ್ಧಿ ಯೋಗ ತಂದೆಯು ಜೊತೆಯಿರುತ್ತದೆ ಎಂದು ಯಾರೂ ತಿಳಿದುಕೊಳ್ಳಬಾರದು. ಅದು ಶುದ್ಧ ಭೋಜನವಷ್ಟೆ ಆಗಿದೆ ಆದರೆ ಶ್ರಮ ಪಡದೆ ಏನೂ ಮಾಡುವುದಕ್ಕಾಗುವುದಿಲ್ಲ. ನೆನಪಿನಿಂದ ಮಾತ್ರ ಶ್ರೇಷ್ಠಾಚಾರಿಯಾಗುತ್ತೇವೆ, ಅದಕ್ಕಾಗಿ ಪವಿತ್ರತೆ ಮುಖ್ಯವಾಗಿರಬೇಕಾಗಿದೆ. ಆತ್ಮ ಶುದ್ಧವಾಗಲು ಯೋಗಬಲವಿರಬೇಕಾಗಿದೆ, ನೀರಿನಲ್ಲಿ ಸ್ನಾನ ಮೊದಲಾದವುಗಳನ್ನು ಮಾಡುವುದರಿಂದ ಆತ್ಮವು ಪಾವನವಾಗುವುದಿಲ್ಲ ಏಕೆಂದರೆ ಆತ್ಮವೇ ಪತಿತವಾಗುವುದು. ಆಭರಣ ನಕಲಿ, ಚಿನ್ನ ಅಸಲಿ ಎಂದು ಹೇಳಲಾಗುವುದಿಲ್ಲ. ನೀರಿನಲ್ಲಿ ಸ್ನಾನ ಮಾಡುವವರು ಆತ್ಮವನ್ನು ಶುದ್ಧವೆಂದು ತಿಳಿದುಕೊಳ್ಳುತ್ತಾರೆ. ಆಭರಣ (ಶರೀರ) ಅಶುದ್ಧವಾಗಿದೆ, ಅದನ್ನು ನಾವು ಸ್ವಚ್ಛ ಮಾಡುತ್ತೇವೆ ಎನ್ನುವುವಂತಲ್ಲ. ಒಂದುವೇಳೆ ಆತ್ಮವು ಶುದ್ಧವಾದಾಗ ಶರೀರವು ಶುದ್ಧವಾಗಿರುತ್ತದೆ. ಇಲ್ಲಿ ಒಬ್ಬರೂ ಶ್ರೇಷ್ಠರಿಲ್ಲ. ಈ ರೀತಿ ಸತ್ಯಯುಗದಲ್ಲಿ ಹೇಳುವುದಿಲ್ಲ ಏಕೆಂದರೆ ಅದು ಸಂಪೂರ್ಣ ನಿರ್ವಿಕಾರಿ ಪ್ರಪಂಚವಾಗಿದೆ. ಶರೀರ ವಿಕಾರಿಯಾಗಿರುವ ಕಾರಣ ಆತ್ಮ ಹೇಗೆ ಪಾವನವಾಗುತ್ತದೆ! ಚಿನ್ನ ಪರಿಶುದ್ದವಾಗಿದ್ದು ಆಭರಣ ನಕಲಿಯಾಗಲು ಸಾಧ್ಯವಿಲ್ಲ. ಇದನ್ನೆಲ್ಲಾ ಚೆನ್ನಾಗಿ ತಿಳಿದುಕೊಳ್ಳಬೇಕು. ಈ ಸಮಯದಲ್ಲಿ ಯಾರೂ ಶ್ರೇಷ್ಠಾಚಾರಿಗಳಿಲ್ಲ. ತಂದೆಯನ್ನೂ ತಿಳಿದುಕೊಂಡಿಲ್ಲ ಮತ್ತು ಪವಿತ್ರರೂ ಇಲ್ಲ.

ನೀವು ಮಕ್ಕಳು ತಿಳಿದುಕೊಂಡಿದ್ದೀರಿ - ಬಡವರೇ ಗುಪ್ತ ಪುರುಷಾರ್ಥವನ್ನು ಮಾಡಿ ರಾಜ್ಯಭಾಗ್ಯವನ್ನು ತೆಗೆದುಕೊಳ್ಳುತ್ತಾರೆ, ಉಳಿದೆಲ್ಲವೂ ವಿನಾಶವಾಗುವುದು. ಈ ಜ್ಞಾನವು ಭಾರತಕ್ಕಾಗಿ ಇದೆ. ನನ್ನ ಭಕ್ತರಿಗೆ ಈ ಜ್ಞಾನವನ್ನು ತಿಳಿಸಬೇಕೆಂದು ತಂದೆಯು ತಿಳಿಸುತ್ತಾರೆ. ಅವರು ಶಿವನ ಪೂಜಾರಿಗಳಾಗಿರಬಹುದು ಅಥವಾ ದೇವತೆಗಳ ಪೂಜಾರಿಗಳಾಗಿರಬಹುದು ಏಕೆಂದರೆ ಅನ್ಯಧರ್ಮಗಳಲ್ಲಿ ಅನೇಕರು ಪರಿವರ್ತನೆಯಾಗಿದ್ದಾರೆ. ಅಲ್ಲಿಂದ ಬಿಟ್ಟು ಬರುತ್ತಾರೆ. ಮುಖ್ಯಮಾತು ಪವಿತ್ರತೆಯಾಗಿರುವ ಕಾರಣ ಅಪವಿತ್ರ ಮನುಷ್ಯರು ಪವಿತ್ರಗುರುಗಳನ್ನು ತಮ್ಮ ಗುರುಗಳನ್ನಾಗಿ ಮಾಡಿಕೊಂಡು ತಲೆ ಬಾಗುತ್ತಾರೆ. ಪರಮಾತ್ಮ ಸದಾ ಪವಿತ್ರವಾಗಿರುವವರು, ಅವರನ್ನು ಸಂಪೂರ್ಣ ನಿರ್ವಿಕಾರಿ ಎಂದು ಎಂದೂ ಸಹ ಹೇಳಲಾಗುವುದಿಲ್ಲ. ಪರಮಾತ್ಮನ ಮಹಿಮೆಯೇ ಭಿನ್ನವಾಗಿದೆ. ದೇವತೆಗಳ ಮಹಿಮೆಯನ್ನು ಭಿನ್ನ ರೂಪದಲ್ಲಿ ಮಾಡಲಾಗುತ್ತದೆ - ಸಂಪೂರ್ಣ ನಿರ್ವಿಕಾರಿ..... ಅವರು ಪುನಃ ಅಗತ್ಯವಾಗಿ ವಿಕಾರಿಗಳಾಬೇಕಾಗುತ್ತದೆ. ಈ ಮಾತುಗಳನ್ನು ಬುದ್ಧಿಯಿಂದ ಧಾರಣೆ ಮಾಡಿ ಅನ್ಯರಿಗೆ ತಿಳಿಸಬೇಕಾಗಿದೆ. ಯಾದವರು ಹಾಗೂ ಕೌರವರು....... ಯಥಾರಾಜಾ-ರಾಣಿ ತಥಾಪ್ರಜೆ ಎಲ್ಲರೂ ನಾಶವಾದರು. ಉಳಿದ ಪಾಂಡವರಿಗೆ ಜಯ ಜಯಕಾರವಾಯಿತು. ಪಾಂಡವರು ಗುಪ್ತವಾಗಿದ್ದಾರೆ. ಶಾಸ್ತ್ರಗಳಲ್ಲಿ ಪಾಂಡವರನ್ನು ಬೆಟ್ಟದ ಮೇಲೆ ಕರಗಿ ಹೋದರೆಂದು ಹೇಳುತ್ತಾರೆ. ಹೀಗೆ ಪ್ರಳಯದ ಮಾತನ್ನು ಹೇಳಿದ್ದಾರೆ ಆದರೆ ಪ್ರಳಯವಾಗುವುದಿಲ್ಲ. ನಾನು ಧರ್ಮ ಸ್ಥಾಪನೆ ಮಾಡುತ್ತೇನೆಂದು ಗೀತೆಯ ಭಗವಂತ ಹೇಳುತ್ತಾರೆ. ರಾಜಯೋಗವನ್ನು ಕಲಿಸಲು ಹಾಗೂ ಪಾವನ ರಾಜ್ಯವನ್ನು ನಿರ್ಮಾಣ ಮಾಡಲು ಪತಿತ ಪ್ರಪಂಚದಲ್ಲಿ ಬಂದಿದ್ದೇನೆ. ಈ ಪ್ರದರ್ಶನಿಯಲ್ಲಿ ರಾಜಯೋಗ ಕಲಿಸಲಾಗುತ್ತದೆ. ನೀವು ತಿಳಿಸಿಕೊಡುವುದರ ಮೇಲೆ ಆಧಾರಿತವಾಗಿದೆ. ನಾವು ಹೇಗೆ ರಾಜಯೋಗದಲ್ಲಿ ಇರುತ್ತೇವೆಂದು ಚಿತ್ರಗಳನ್ನು ಮಾಡಬೇಕೆಂದು ತಂದೆಯು ಹೇಳಿದ್ದರು. ಮೇಲೆ ಶಿವ ತಂದೆಯ ಚಿತ್ರವಿರಲಿ, ನಾವು ಶಿವ ತಂದೆಯ ನೆನಪಿನಲ್ಲಿ ಕುಳಿತಿದ್ದೇವೆ ಮತ್ತು ಅವರ ಮತದಂತೆ ನಡೆಯುತ್ತೇವೆ. ಅವರು ಶ್ರೀ, ಶ್ರೀ ರುದ್ರನಾಗಿದ್ದಾರೆ. ಅವರು ನಮ್ಮನ್ನು ಶ್ರೇಷ್ಠ ಮಾಡುತ್ತಾರೆ. ವಾಸ್ತವದಲ್ಲಿ ಶ್ರೀ, ಶ್ರೀ ಎಂಬ ಬಿರುದು ಅವರದೇ ಆಗಿದೆ. ಈ ಭಾರತ ಇಷ್ಟೊಂದು ಏಕೆ ಕೆಳ ಮಟ್ಟಕ್ಕೆ ಬಂದಿಳಿದಿದೆ? ಒಂದನೆಯದಾಗಿ ಈಶ್ವರನನ್ನು ಸರ್ವವ್ಯಾಪಿ ಎಂದು ತಿಳಿದು

ಕುಳಿತಿರುವುದು ಹಾಗೂ ಎರಡನೆಯದಾಗಿ ತನ್ನನ್ನು ಈಶ್ವರನೆಂದು ತಿಳಿದು ಕುಳಿತಿದ್ದಾರೆ.

ಸದ್ಗುರುವಂತು ಒಬ್ಬರೇ ತಂದೆಯಾಗಿದ್ದಾರೆಂದು ನೀವು ತಿಳಿದುಕೊಂಡಿದ್ದೀರಿ. ಇದು ಅವರ ಜನ್ಮ ಭೂಮಿಯಾಗಿದೆ, ಸತ್ಯ ನಾರಾಯಣ ಕಥೆಯನ್ನು ತಂದೆಯೇ ಬಂದು ಹೇಳಿ ಜೀವನವೆಂಬ ದೋಣಿಯನ್ನು ಪಾರು ಮಾಡುತ್ತಾರೆ. ಪತಿತ-ಪಾವನನೆಂದು ನೀವು ನನಗೆ ಹೇಳುತ್ತೀರಲ್ಲವೇ, ನಾನೇ ಎಲ್ಲರನ್ನು ಕರೆದುಕೊಡು ಹೋಗಬೇಕಾಗಿದೆ. ಇದು ಅಂತಿಮ ಸಮಯವಾಗಿದೆ, ಈಗ ಎಲ್ಲರೂ ತಮ್ಮ ಲೆಕ್ಕಾಚಾರವನ್ನು ಸಮಾಪ್ತಿ ಮಾಡಿ ಹಿಂತಿರುಗಿ ಹೋಗಬೇಕಾಗಿದೆ. ಎಲ್ಲರೂ ನವಭಾರತ, ನವದೆಹಲಿ ನಿರ್ಮಾಣವಾಗಬೇಕು ಎಂದು ಹೇಳುತ್ತಾರೆ. ನವಭಾರತವಂತು ಸ್ವರ್ಗದಲ್ಲಿತ್ತು, ಈಗ ನರಕವಿದೆಯಲ್ಲವೇ! ಭ್ರಷ್ಟಾಚಾರಿ ಆಗುತ್ತಿರುತ್ತಾರೆ. ಇದನ್ನು ತಿಳಿದು ಹಾಗೂ ತಿಳಿಸುವಂತಹ ಮಾತುಗಳಾಗಿವೆ. ಆತ್ಮ ಮತ್ತು ಪರಮಾತ್ಮನ ರೂಪವನ್ನು ಯಾರೂ ತಿಳಿದುಕೊಂಡಿಲ್ಲ. ನಾವು ಆತ್ಮ, ಪರಮಾತ್ಮನ ಮಕ್ಕಳಾಗಿದ್ದೇವೆಂದು ಹೇಳುತ್ತಾರೆ ಆದರೆ ಆತ್ಮ ಹಾಗೂ ಪರಮಾತ್ಮನ ಜ್ಞಾನವೂ ಇರಬೇಕಲ್ಲವೇ! ತಂದೆಯಲ್ಲಿ ಮಾತ್ರ ಈ ಜ್ಞಾನವಿದೆ. ಆತ್ಮನಲ್ಲಿ ಈ ಜ್ಞಾನವೆಲ್ಲಿದೆ? ನಾವು ಆತ್ಮ ಎಷ್ಟು ಪುನರ್ಜನ್ಮವನ್ನು ತೆಗೆದುಕೊಳ್ಳುತ್ತೇವೆ. ಎಲ್ಲಿರುತ್ತೇವೆ, ಮತ್ತೆ ಹೇಗೆ ಬರುತ್ತೇವೆ, ಹೇಗೆ ದುಃಖಿಗಳಾಗುತ್ತೇವೆ..... ಯಾವ ಮಾತುಗಳನ್ನೂ ಸಹ ತಿಳಿದುಕೊಂಡಿಲ್ಲ. ತಂದೆಯು ನಾವು ಆತ್ಮರನ್ನು ಪವಿತ್ರವನ್ನಾಗಿ ಮಾಡಲು ಬಂದಿದ್ದಾರೆಂದು ನೀವು ಮಕ್ಕಳು ತಿಳಿದುಕೊಂಡಿದ್ದೀರಿ. ಅದಕ್ಕಾಗಿ ದೈವೀಗುಣಗಳಿರಬೇಕಲ್ಲವೇ! ನಾನು ದೇವತೆ ಆಗುತ್ತಿದ್ದೇನೆ ಅಂದಮೇಲೆ ನನ್ನಲ್ಲಿ ಯಾವುದೇ ಅವಗುಣ ಇರಬಾರದು. ಒಂದುವೇಳೆ ಅವಗುಣವಿದ್ದರೆ ನೂರು ಪಟ್ಟು ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ. ಪವಿತ್ರತೆಯ ಪ್ರತಿಜ್ಞೆ ಮಾಡಿ ಮತ್ತೆ ಯಾವುದೇ ಅಶುದ್ಧ ಕರ್ತವ್ಯವನ್ನು ಮಾಡಿದರೆ 100% ಅಪವಿತ್ರರಾಗಿ ಬಿಡುವರು. ಸೇವೆಗೆ ಬದಲಾಗಿ ಮತ್ತಷ್ಟು ಡಿಸ್ಸರ್ವೀಸ್ ಮಾಡುತ್ತಾರೆ. ಆದ್ದರಿಂದ ಮತ್ತೆ ಪದವಿ ಭ್ರಷ್ಟರಾಗುತ್ತಾರೆ. ಪರಸ್ಪರ ಸದಾ ಒಬ್ಬರಿಗೊಬ್ಬರು ಜ್ಞಾನದ ಚರ್ಚೆ ಮಾಡುತ್ತಿರಬೇಕಾಗಿದೆ. ನಾವು ಮುಳ್ಳುಗಳಿಂದ ಹೂಗಳು ಅಥವಾ ಮನುಷ್ಯರಿಂದ ದೇವತೆಗಳಾಗಲು, ತಂದೆಯಿಂದ ಸ್ವರ್ಗದ ಆಸ್ತಿಯನ್ನು ತೆಗೆದುಕೊಳ್ಳಲು ತಂದೆಯ ಬಳಿ ಬಂದಿದ್ದೇವೆ. ಇದೇ ಮಾತುಗಳನ್ನು ಪರಸ್ಪರದಲ್ಲಿ ತಿಳಿಸಬೇಕಾಗಿದೆ. ಆತ್ಮ ಹಾಗೂ ಪರಮಾತ್ಮನ ರೂಪವನ್ನೂ ಸಹ ಯಾರೂ ತಿಳಿದುಕೊಂಡಿಲ್ಲ. ಆತ್ಮವು ಪರಮಾತ್ಮನ ಸಂತಾನವೆಂದು ಕೇವಲ ಹೇಳುತ್ತಾರೆ ಆದರೆ ಇದರ ತಿಳುವಳಿಕೆಯಿರಬೇಕು, ಧಾರಣೆಯೂ ಇರಬೇಕು. ಯಾರು ಮಾಯಾವೀ ಮಾತುಗಳನ್ನು ಹೇಳುತ್ತಾರೆ, ಕೆಲವರಿಗೆ ದುಃಖ ಕೊಡುತ್ತಾರೆ, ಅವರನ್ನು ಪದವಿ ಭ್ರಷ್ಟರೆಂದು ಹೇಳಲಾಗುತ್ತದೆ. ಆಸುರರಿಗೆ ಜ್ಞಾನಾಮೃತವನ್ನು ಕುಡಿಸುತ್ತಿದ್ದರು ನಂತರ ಹೊರಗೆ ಹೋಗಿ ಹೊಲಸು ಮಾಡುತ್ತಿದ್ದರೆಂದು ತೋರಿಸಲಾಗಿದೆಯಲ್ಲವೇ! ಇಂತಹವರೂ ಅನೇಕರಿದ್ದಾರೆ ಅವರು ಇಲ್ಲಿ ಜ್ಞಾನಾಮೃತವನ್ನು ಕುಡಿಯುತ್ತಾ ಹೊರಗೆ ಹೋಗಿ ಡಿಸ್ಸರ್ವೀಸ್ ಸಹ ಮಾಡುತ್ತಿರುತ್ತಾರೆ. ವಾಸ್ತವದಲ್ಲಿ ನೀವೆಲ್ಲರೂ ಕನ್ಯೆಯರಾಗಿದ್ದೀರಿ, ಅರೇ..! ಅಧರ್ಕುಮಾರಿಯ (ಮಾತೆಯರು) ಮಂದಿರ ಮಾಡಲ್ಪಟ್ಟಿದೆ. ದಿಲ್ವಾಡ ಮಂದಿರವಂತು ನಿಮ್ಮ ಯಥಾರ್ಥವಾದ ನೆನಪಾರ್ಥವಾಗಿದೆ. ನಿಮ್ಮಲ್ಲಿಯೂ ಕೆಲವರ ಬುದ್ಧಿಯಲ್ಲಿ ಬಹಳ ಕಷ್ಟದಿಂದ ಕುಳಿತುಕೊಳ್ಳುತ್ತದೆ ಏಕೆಂದರೆ ಇದರಲ್ಲಿ ಬುದ್ಧಿಯು ಬಹಳ ಸ್ವಚ್ಛವಾಗಿರಬೇಕು. ನೀವೀಗ ಈಶ್ವರೀಯ ಪರಿವಾರದವರಾಗಿದ್ದೀರಿ ಅಂದಮೇಲೆ ನಮ್ಮ ಚಲನೆಯು ಎಷ್ಟೊಂದು ಉನ್ನತವಾಗಿರಬೇಕೆಂದು ವಿಚಾರ ಮಾಡಬೇಕು. ಇವರಿಗೆ ಯಥಾರ್ಥವಾದ ಶ್ರೀಮತ ಸಿಗುತ್ತಿದೆ ಎಂದು ಮನುಷ್ಯರು ತಿಳಿಯಬೇಕು. ಇಲ್ಲಿ ಶ್ರೇಷ್ಠಾತಿ ಶ್ರೇಷ್ಠರಾಗಬೇಕು ಆಗ ಅಲ್ಲಿ ಪದವಿ ಸಿಗುತ್ತದೆ. ಇಲ್ಲಿಯೇ ಶ್ರೇಷ್ಠರಾಗಬೇಕು. ಗೃಹಸ್ಥ-ವ್ಯವಹಾರದಲ್ಲಿರುತ್ತಾ ಈ ಅಂತಿಮ ಜನ್ಮದಲ್ಲಿ ಪವಿತ್ರವಾಗಿರಬೇಕು. ಒಳ್ಳೆಯದು.

ಧಾರಣೆಗಾಗಿ ಮುಖ್ಯಸಾರ:

1. ಶುದ್ಧ ಭೋಜನವನ್ನು ಸ್ವೀಕರಿಸುತ್ತಾ ಆತ್ಮನನ್ನು ಪಾವನ ಮಾಡುವುದಕ್ಕಾಗಿ ಅಗತ್ಯವಾಗಿ ನೆನಪಿನಲ್ಲಿರುವಂತಹ ಶ್ರಮ ಪಡಬೇಕು. ನೆನಪಿನಿಂದಲೇ ಶ್ರೇಷ್ಠಾಚಾರಿಯಾಗಬೇಕು. ವಿಕರ್ಮ ವಿನಾಶ ಮಾಡಿಕೊಳ್ಳಬೇಕು.

2. ಅಂತಿಮ ಸಮಯದಲ್ಲಿ ಮನೆಗೆ ಹಿಂತಿರುಗಿ ಹೋಗುವ ಕಾರಣ ಹಳೆಯ ಎಲ್ಲಾ ಲೆಕ್ಕಾಚಾರವನ್ನು ಸಮಾಪ್ತಿ ಮಾಡಿಕೊಳ್ಳಬೇಕು. ಪರಸ್ಪರದಲ್ಲಿ ಜ್ಞಾನದ ಚರ್ಚೆ ಮಾಡಬೇಕು. ಮಾಯಾವಿ ಮಾತುಗಳನ್ನು ಮಾತನಾಡಬಾರದು.

ವರದಾನ: ಪವಿತ್ರತೆಯ ಘನತೆಯ ಮೂಲಕ ಬ್ರಾಹ್ಮಣ ಜೀವನದ ವಿಶೇಷತೆಯನ್ನು ಪ್ರತ್ಯಕ್ಷಗೊಳಿಸುವಂತಹ ಸಂಪೂರ್ಣ ಪವಿತ್ರ ಭವ.

ಪವಿತ್ರತೆಯ ಘನತೆಯೇ ಬ್ರಾಹ್ಮಣ ಜೀವನದ ವಿಶೇಷತೆಯಾಗಿದೆ. ಹೇಗೆ ಯಾರಾದರೂ ಬಹಳ ಶ್ರೇಷ್ಠ ಮನೆತನದ ಮಕ್ಕಳಾಗಿದ್ದಾರೆ, ಅವರ ಚಹರೆಯಿಂದ, ಚಲನೆಯಿಂದ ತಿಳಿದುಬರುತ್ತದೆ - ಇವರು ಯಾವುದೋ ರಾಯಲ್ ಕುಲದವರಾಗಿದ್ದಾರೆ. ಅದೇರೀತಿ ಬ್ರಾಹ್ಮಣ ಜೀವನದ ಪರಿಶೀಲನೆಯೂ ಪವಿತ್ರತೆಯ ಹೊಳಪಿನಿಂದ ತಿಳಿದು ಬರುತ್ತದೆ. ಯಾವಾಗ ಸಂಕಲ್ಪದಲ್ಲಿಯೂ ಅಪವಿತ್ರತೆಯ ಹೆಸರು -ಚಿಹ್ನೆಗಳಿರುವುದಿಲ್ಲವೋ ಆಗ ಚಲನೆ ಹಾಗೂ ಚಹರೆಯಿಂದ ಪವಿತ್ರತೆಯ ಹೊಳಪು ಕಂಡು ಬರುತ್ತದೆ. ಪವಿತ್ರತೆ ಎಂದರೆ ಯಾವುದೇ ವಿಕಾರ ಅಥವಾ ಅಶುದ್ಧಿಯ ಪ್ರಭಾವವಿರದೇ ಇರುವುದು. ಹೀಗಿದ್ದಾಗ ಸಂಪೂರ್ಣ ಪವಿತ್ರರೆಂದು ಹೇಳಲಾಗುವುದು.

ಸ್ಲೋಗನ್: ಯಾರು ವ್ಯರ್ಥವನ್ನು ಸಮರ್ಥದಲ್ಲಿ ಪರಿವರ್ತನೆ ಮಾಡಿ ಬಿಡುತ್ತಾರೆಯೋ ಅವರೇ ಪವಿತ್ರ ಹಂಸಗಳಾಗಿದ್ದಾರೆ.